Impact Factor-8.575 (SJIF) ISSN-2278-9308

# B.Aadhar

Peer-Reviewed & Refreed Indexed

**Multidisciplinary International Research Journal**

## January -2023

**(CCCLXXVIII) 393**

**Sciences, Social Sciences, Commerce, Education, Language & Law**








**Chief Editor**
**Prof. Virag S. Gawande**
**Director**
**Aadhar Social Research & Development Training Institute Amravati**

**Editor**
**Prof. S. G. Keshannavar**
**Principal**

Sri Annadaneswar Arts Science Commerce Degree College and P.G. Centre, Naregal Taluk: Gajendragad Dist: Gadag
**Dr. D. L. Pawar, Dr. Ravi C. S., Sri Pundalik H. Madardr,. Dr.Kallayya S. Hiremath,**
**Dr M. R. Shivaram, Dr. Virupakshappa Y. K., Dr. Ratna R. Patil, Dr Nasirahmed M Jangubhai**

**This Journal is indexed in :**
- **Scientific Journal Impact Factor (SJIF)**
- **Cosmos Impact Factor (CIF)**
- **International Impact Factor Services (IIFS)**

For Details Visit To : *www.aadharsocial.com*

Aadhar Publications

**Impact Factor – (SJIF) –8.575** **ISSN – 2278-9308**

# B.Aadhar

## Single Blind Peer-Reviewed & Refereed Indexed

### Multidisciplinary International Research Journal

## January -2023

**ISSUE No - 393 (CCCXCIII)**

**Sciences, Social Sciences, Commerce, Education, Language & Law**

**Prof. Virag.S.Gawande**
Chief Editor
Director
Aadhar Social Research &, Devèlopment Training Institute, Amravati.
Editors
**Prof. S. G. KESHANNAVAR**
**Principal**
Shree Annadaneshwar Arts Science Commerce College & P.G. Centre, Naregal
Tq: Gajendragad Dist: Gadag
**Dr. D. L. PAWAR**
**Dr. RAVI C. S.**
**SRI PUNDALIK H. MADAR**
**Dr. KALLAYYA S. HIREMATH**
**Dr M. R. SHIVARAM**
**Dr VIRUPAKSHAPPA Y. K.**
**Dr. RATNA R. PATIL**
**Dr NASIRAHMED M JANGUBHAI**

## Aadhar International Publication

For Details Visit To : www.aadharsocial.com
© **All rights reserved with the authors & publisher**

# EDITORS:

**Prof. S. G. KESHANNAVAR**
**Principal**
Shree Annadaneshwar Arts Science Commerce College & P.G. Centre, Naregal
Tq: Gajendragad Dist: Gadag

**Dr. D. L. PAWAR**
Assistant Professor and Head
Department of Political Science
S. A. Degree College, Naregal
Dist: Gadag

**Dr. RAVI C. S.**
Assistant Professor and Head
Department of Commerce
S. A. Degree College, Naregal
Dist: Gadag

**SRI PUNDALIK H. MADAR.**
Assistant Professor
Department of Kannada
S. A. Degree College, Naregal
Dist: Gadag

**Dr. KALLAYYA S. HIREMATH**
Assistant Professor
Department of Kannada
S. A. Degree College, Naregal
Dist: Gadag

**Dr M. R. SHIVARAM**
Assistant Professor and Head
Department of Geography
S. A. Degree College, Naregal
Dist: Gadag

**Dr VIRUPAKSHAPPA Y. K.**
Assistant Professor and Head
Department of Political Science
Mahantswamy Arts Science & Commerce
College, Haunsbhavi Dist: Haveri

**Dr. RATNA R. PATIL**
Assistant Professor
Department of Commerce
S. A. Degree College, Naregal
Dist: Gadag

**Dr NASIRAHMED M JANGUBHAI**
Assistant Professor and Head
Department of Political Science
Government First Grade College, Dandeli
Dist: Uttarkannada

 ISSN : 2278-9308
January, 2023

# Editorial Board

**Chief Editor -**
**Prof.Virag S.Gawande,**
**Director,**
Aadhar Social Research &,
Development Training Institute, Amravati. **[M.S.] INDIA**

**Executive-Editors -**

- **Dr.Dinesh W.Nichit** - Principal, Sant Gadge Maharaj Art's Comm,Sci Collage, **Walgaon.Dist. Amravati.**
- **Dr.Sanjay J. Kothari** - Head, Deptt. of Economics, G.S.Tompe Arts Comm,Sci Collage Chandur Bazar Dist. Amravati

**Advisory Board -**

- **Dr. Dhnyaneshwar Yawale** - Principal, Sarswati Kala Mahavidyalaya , Dahihanda, Tq-Akola.
- **Prof.Dr. Shabab Rizvi** ,Pillai's College of Arts, Comm. & Sci., New Panvel, Navi Mumbai
- **Dr. Udaysinh R. Manepatil** ,Smt. A. R. Patil Kanya Mahavidyalaya, Ichalkaranji,
- **Dr. Sou. Parvati Bhagwan Patil** , Principal, C.S. Shindure College Hupri, Dist Kolhapur
- **Dr.Usha Sinha** , Principal ,G.D.M. Mahavidyalay,Patna Magadh University.Bodhgay Bihar

**Review Committee -**

- **Dr. D. R. Panzade,** Assistant Pro. Yeshwantrao Chavan College, Sillod. Dist. Aurangabad (MS)
- **Dr.Suhas R.Patil** ,Principal ,Government College Of Education, Bhandara, Maharashtra
- Dr. **Kundan Ajabrao Alone** ,Ramkrushna Mahavidyalaya, Darapur Tal-Daryapur, Dist-Amravati.
- **DR. Gajanan P. Wader** Principal , Pillai College of Arts, Commerce & Science, Panvel
- **Dr. Bhagyashree A. Deshpande,** Professor Dr. P. D. College of Law, Amravati]
- **Dr. Sandip B. Kale,** Head, Dept. of Pol. Sci., Yeshwant Mahavidyalaya, Seloo, Dist. Wardha.
- **Dr. Hrushikesh Dalai** , Asstt. Professor K.K. Sanskrit University, Ramtek

*Our Editors have reviewed paper with experts' committee, and they have checked the papers on their level best to stop furtive literature. Except it, the respective authors of the papers are responicible for originality of the papers and intensive thoughts in the papers.*

**- Executive Editor**

**Published by -**
**Prof.Virag Gawande**
**Aadhar Publication** ,Aadhar Social Research & Development Training Institute, New Hanuman Nagar, In Front Of Pathyapustak Mandal, Behind V.M.V. College,Amravati
( M.S ) India Pin- 444604 **Email :** aadharpublication@gmail.com
**Website :** www.aadharsocial.com **Mobile :** 9595560278 /

**B.Aadhar'** International Peer-Reviewed Indexed Research Journal
Impact Factor -(SJIF) –8.575, Issue NO, (CCCXCIII) 393
ISSN : 2278-9308
January, 2023

# INDEX


| No. | Title of the Paper | Authors' Name | Page No. |
|---|---|---|---|
| 1 | Sports Nutrition | **Mr.S.B. Goudar** | 1 |
| 2 | Centre-State Relations | **Dr. Bibi Fatima** | 6 |
| 3 | The role of Dr.B.R.Ambedkar In The Framing Of Indian Constitution | **Dr. Basavaraj N. Hosamani** | 12 |
| 4 | A study on the impact of e-commerce in india and its issues & challenges | **Salesha B. Belgaum** | 16 |
| 5 | How india has changed since independence From a developing present to promising future | **Dr. Lalita. S. Chavadi** | 21 |
| 6 | Fdi In Indian Insurance Sector – An Overview | **Mahendra G** | 25 |
| 7 | Infrastructure Development programs | **Dr. Paravin. M. Shaikh** | 31 |
| 8 | Concepts of law | **Irpan Rafeek Jakati** | 35 |
| 9 | Relevance of buddhism | **Dr. Nasirahmed M Jangubhai** | 41 |
| 10 | Human Capital Formation In India | **Shaik Mehaboob** | 47 |
| 11 | Colonial state: an overview | **Lata N. Killedar** | 53 |
| 12 | Comparative Public Administration: An Overviw | ***Dr D. L. Pawar*** | 60 |
| 13 | Npa's As A Crucial Parameter To Guage The Performance And Monetary Health Of Banks In Bharat | **Smt. Sd. Madhuri Raghavendran Ms. Pooja. A** | 67 |
| 14 | Health Infrastructure In India With Special Reference To Rural Health Services In Kadaba Taluk (Karnataka) | **Veronica Prabha V P, Dr. Yathish kumar** | 75 |
| 15 | Literature Review Of Entrepreneurial Development | **Dr. Jayanandaswami Indimath,** | 82 |
| 16 | Natural Hazards And Disasters | **Prof. Ramesh T. Lamani** | 86 |
| 17 | Women's Movement And Historical Background Doing Gender In India | **Jagannath S. Malgond** | 93 |
| 18 | Indian Banking: Challenges Of Technological Advancement And Innovation | **Raghavendra C.R** | 100 |
| 19 | Powers And Responsibilities Of Members Of Indian Parliament: Issues Challenges | **Prof. S. S. Hiremath** | 107 |
| 20 | ಲಂಬಾಣಿ ಮಹಿಳೆಯರ ಸಾಂಸ್ಕೃತಿಕ ಬದುಕು | **ಡಾ. ಕುಮಾರ್ ಜೆ.** | 112 |
| 21 | "ಹೈದರಾಬಾದ್ ಕರ್ನಾಟಕ ವಿಮೋಚನೆಯಲ್ಲಿ ಕೊಪ್ಪಳ ಜಿಲ್ಲಾ ಹೋರಾಟಗಾರರ ಕುರಿತು ಒಂದು ಅಧ್ಯಯನ" | **ಶ್ರೀಮತಿ:ಭಾರತಿ ಎಚ್ ಮಣ್ಣೂರ ಡಾ. ಪ್ರಕಾಶ ಎಸ್ ಕಟ್ಟಿಮನಿ** | 117 |

| | | |
|---|---|---|
| 22 | 2008 ರಿಂದ 2013 ರವರೆಗೆ ಕರ್ನಾಟಕದ ಶಾಸನ ಸಭೆಯಲ್ಲಿ ಪ್ರತಿಪಕ್ಷದ ಕಾರ್ಯಾಚರಣೆ **ಡಾ. ನಾಗರತ್ನ ಎನ್. ಕುರ್ಡೇಕರ** | 125 |
| 23 | ವೈದೇಹಿಯವರ ಕತೆಗಳಲ್ಲಿ ಸ್ತ್ರೀ ಸ್ವಾತಂತ್ರ ಮತ್ತು ಸಮಾನತೆಯ ಆಶಯಗಳು **ಡಾ. ಶಿವಲಿಂಗಪ್ಪ ಆಯ್. ಭಂಡಾರಿ** | 130 |
| 24 | ಸರ್ವಜ್ಞನ ಭಕ್ತಿಯಲ್ಲಿ ಆಚಾರ ವಿಚಾರ **ಡಾ. ಅಣ್ಣಪ್ಪ ಬಿ. ರೊಟ್ಟಿಗವಾಡ** | 134 |
| 25 | ಸ್ಥಳೀಯ ಸಂಸ್ಥೆಗಳು ಮತ್ತು ದಲಿತರ ಸಬಲೀಕರಣ: ಒಂದು ಅವಲೋಕನ: **ಡಾ. ಸಚೀನ ವಿಠ್ಠಲ ಅಂಕಲಗಿ** | 137 |
| 26 | ವೀರಶೈವ: ತತ್ವ ಮತ್ತು ಸಿದ್ಧಾಂತಗಳು **ಡಾ.ಸಂತೋಷ ಹಿರೇಮಠ** | 141 |
| 27 | ಕಲ್ಯಾಣ ಕ್ರಾಂತಿ: ಒಂದು ವಿವೇಚನೆ **ಡಾ. ಸುರೇಶ ಹನಗಂಡಿ** | 145 |
| 28 | ನಯಸೇನನ ಧರ್ಮಾಮೃತ: ಒಂದು ವಿಶ್ಲೇಷಣೆ **ಡಾ. ಬಸವರಾಜ ಸಾಲವಾಡಗಿ** | 149 |
| 29 | ದೇವಿಪುರಾಣ–ದೇಹ ಪುರಾಣ **ಡಾ. ರಮೇಶ ಮ. ಕಲ್ಲನಗೌಡರ** | 154 |
| 30 | Globalization And Nationalism **Dr. Devappa H. Biradar** | 158 |
| 31 | Locational Pattern Of Slums In Haveri District: A Geographical Analysis **R.V. Rayannavar* and Dr. (Smt.) V.B. Saviramath** | 164 |
| 32 | India's Foreign Policy: Emerging New Principles and Policies for the Evolved Global Interactions and Orientation **Dr. Mamata Sawakar** | 170 |
| 33 | Common Sports Injuries **Mr. Venkatesh .P** | 173 |
| 34 | The Role of Good Governance and Social Obligation on the Achievement of Sustainable Development in India **Dr. Jyothi C V** | 182 |

**B.Aadhar** International Peer-Reviewed Indexed Research Journal
Impact Factor -(SJIF) –8.575, Issue NO, (CCCXCIII) 393
ISSN : 2278-9308
January, 2023

# ವೈದೇಹಿಯವರ ಕತೆಗಳಲ್ಲಿ ಸ್ತ್ರೀ ಸ್ವಾತಂತ್ರ ಮತ್ತು ಸಮಾನತೆಯ ಆಶಯಗಳು

ಡಾ. ಶಿವಲಿಂಗಪ್ಪ ಆಯ್. ಭಂಡಾರಿ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜಿ.ಪಿ ಪೋರ್‌ವಾಲ ಕಲಾ ವಾಣಿಜ್ಯ ಹಾಗೂ ವಿ. ವಿ ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ ಸಿಂದಗಿ.
ಜಿಲ್ಲೆ: ವಿಜಯಪುರ ಕರ್ನಾಟಕ ರಾಜ್ಯ

ವೈದೇಹಿಯವರ ಕತೆಗಳಲ್ಲಿ ಸ್ತ್ರೀಪರ ಪರ ಸಂವೇದನೆ ಹಾಗೂ ಸಾಮಾಜಿಕ ನಿಲುವುಗಳ ಬಗೆಗೆ ಮುಕ್ತ ಆಲೋಚನೆಗಳಿದ್ದು ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ವೈವಿಧ್ಯತೆಯಿದೆ.ಗಂಡು-ಹೆಣ್ಣಿನ ಸಂಬಂಧ ಕುರಿತು ವಿವೇಚಿಸುವುದು, ಸಾಮಾಜಿಕ ಅಸಮಾನತೆಯನ್ನು ಕುರಿತು ಪ್ರಶ್ನಿಸುವುದು, ಸ್ತ್ರೀ ಶಿಕ್ಷಣದ ಅಗತ್ಯದ ಅರಿವು ಮೂಡಿಸುವುದು, ವ್ಯಕ್ತಿ ಸ್ವಾತಂತ್ರ್ಯತೆಯನ್ನು ಎತ್ತಿ ಹಿಡಿಯುವುದು ಇವೇ ಮೊದಲಾದ ವೈಯಕ್ತಿಕ ಮತ್ತು ಸಾಮಾಜಿಕ ಕಾಳಜಿಗಳ ಅಭಿವ್ಯಕ್ತಿ ಇವರ ಕತೆಗಳ ವೈಶಿಷ್ಟ್ಯವಾಗಿದೆ.

ಸ್ತ್ರೀಯ ಸ್ಥಾನಮಾನ, ಮಾನಾಪಮಾನಗಳ ಪ್ರಶ್ನೆ, ನೋವು-ನಲಿವುಗಳು, ವಿವಾಹ ಪೂರ್ವ-ವಿವಾಹ ನಂತರದ ಲೈಂಗಿಕ ಸಂಬಂಧಗಳಿಂದ ಉಂಟಾದ ಸಮಸ್ಯೆಗಳನ್ನು ಕುರಿತ ಅನೇಕ ಮೂಲಭೂತ ಪ್ರಶ್ನೆಗಳನ್ನು ವೈದೇಹಿಯವರು ತಮ್ಮ ಕತೆಗಳಲ್ಲಿ ಎತ್ತಿದ್ದಾರೆ.ಸ್ತ್ರೀ ಜಗತ್ತಿನ ಸಮಸ್ಯೆಗಳನ್ನು ವಸ್ತುನಿಷ್ಟವಾಗಿ ಮತ್ತು ಅನುಭಾವಾತ್ಮಕವಾಗಿ ಸರಳವಾದ ಶೈಲಿಯಲ್ಲಿ ಆತ್ಮೀಯವಾಗಿ ಚಿತ್ರಿಸಿದ್ದಾರೆ.

ಮನಃಶಾಸ್ತ್ರದ ನೆಲೆಯಲ್ಲಿ, ವೈಚಾರಿಕ ನೆಲೆಯಲ್ಲಿ ಸ್ತ್ರೀ-ಕೇಂದ್ರಿತ ಪಾತ್ರಗಳನ್ನು ವ್ಯಾಖ್ಯಾನಿಸಿದ್ದಾರೆ.ಸ್ತ್ರೀ -ಸ್ವಾತಂತ್ರ್ಯತೆ, ಆರ್ಥಿಕ ಸಮಾನತೆಯಂತಹ ಆಶಯಗಳನ್ನು, ಹೆಣ್ಣು-ಗಂಡಿನ ಸಂಬಂಧಗಳನ್ನು ಹಾಗೂ ಸ್ತ್ರೀ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ಪರಿಶೋಧಿಸುವ ಪ್ರಯತ್ನ ಮಾಡಿದ್ದಾರೆ.ಇವರು ಪುರುಷ ಪ್ರಧಾನ ವ್ಯವಸ್ಥೆಯ ರೀತಿ-ನೀತಿಗಳನ್ನು ಸೈದ್ಧಾಂತಿಕವಾಗಿ ಆಲೋಚಿಸಿದ್ದಾರೆ.ಮಹಿಳಾ ಶೋಷಣೆಯ ಭಿನ್ನ ನೆಲೆಗಳನ್ನು ತಮ್ಮ ಕತೆಗಳಲ್ಲಿ ಬಿಚ್ಚಿಟ್ಟಿದ್ದಾರೆ.

ಸ್ತ್ರೀ ಸ್ವಾತಂತ್ರ್ಯ ಹಾಗೂ ಸಮಾನತೆಯ ಆಶಯಗಳ ಬಗೆಗೆ ಗಾಂಧೀಜಿಯವರ ಅಭಿಪ್ರಾಯವನ್ನು ತಿಪ್ಪೇರುದ್ರಸ್ವಾಮಿಯವರು ಹೀಗೆ ಸಂಗ್ರಹಿಸಿ ಹೇಳಿದ್ದಾರೆ :

"ಹೆಂಗಸು ಅಹಿಂಸೆಯ ಅವತಾರ ಎಂಬುದನ್ನು ನಾನು ಪತ್ರಿಕೆಯ ಕಾಲಮುಗಳಲ್ಲಿ ಶ್ರುತಪಡಿಸಿದ್ದೇನೆ. ಅಹಿಂಸೆ ಅಂದರ ಅನಂತವಾದ ಪ್ರೇಮ.ಅನಂತ ಪ್ರೇಮವೆಂದರೆ ನಿಮವಾದ ಸಹನಾ ಸಾಮರ್ಥ್ಯ.ಮಾನವ ಜನನಿಯಾದ ಸ್ತ್ರೀ ಹೊರತು ಮತ್ತಾರು ಇಷ್ಟೊಂದು ಅಧಿಕ ಪ್ರಮಾಣದಲ್ಲಿ ಈ ಗುಣವನ್ನು ಯಾರು ತೋರಬಲ್ಲರು?ತಾವು ಅಬಲಾ ವರ್ಗಕ್ಕೆ ಸೇರಿದವರೆಂಬುದನ್ನು ಹೆಂಗಸರು ಮರೆಯುವುದಾದರೆ, ಯುದ್ಧ ವಿರುದ್ಧವಾಗಿ ಅವರು ಗಂಡಸರಿಗಿಂತ ಎಷ್ಟೋ ಹೆಚ್ಚಾಗಿ ಕೆಲಸ ಮಾಡಬಲ್ಲರು. ಹೀಗೆ ಸ್ತ್ರೀ ಮತ್ತು ಪುರುಷರನ್ನು ಸಮಾನರೆಂದು ಭಾವಿಸುವ ಗಾಂಧಿವಾದ ಸಾಮಾಜಿಕ ವ್ಯವಹಾರಗಳಲ್ಲಿ ಹಾಗೂ ಕುಟುಂಬದಲ್ಲೂ ಇಬ್ಬರ ಸಹಭಾಗಿತ್ವ ಅನಿವಾರ್ಯವೆಂಬುದನ್ನು ಹೇಳುತ್ತದೆ."[೧]

"ಸ್ತ್ರೀಯರು ಪುರುಷರ ದಾಸ್ಯವನ್ನು ತೊರೆಯುವ ಮೂಲಕವೇ ಅವರ ಏಳಿಗೆಗಾಗಿ ವಿಧಿವಿಧಾನಗಳನ್ನು ರೂಪಿಸಬಹುದು.ಅಂದರೆ, ಸ್ತ್ರೀಯರು ಕುಟುಂಬದ ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾನತೆಗಾಗಿ ಹೋರಾಡುವುದು ಆರೋಗ್ಯಪೂರ್ಣವಲ್ಲ, ಬದಲಿಗೆ ಸ್ತ್ರೀಯರು ಕುಟುಂಬದ ಒ ಒಳಗಿದ್ದೇ ಸಮಾನತೆಯನ್ನು ಸಾಧಿಸುವ ಪ್ರಯತ್ನ ಮಾಡಬೇಕು.ವಿವಾಹವಾಗಲು ಆರ್ಥಿಕ ಸಾಮರ್ಥ್ಯವಿಲ್ಲದವರು ವಿವಾಹವಾಗಬಾರದು"[೨] ಎಂದು ಸ್ತ್ರೀ ಸ್ವಾತಂತ್ರ್ಯ ಹಾಗೂ ಸಮಾನತೆಯ ಬಗ್ಗೆ ಅಂಬೇಡ್ಕರ್ ಪ್ರತಿಪಾದಿಸುತ್ತಾರೆ.

ಸ್ತ್ರೀ ಸ್ವಾತಂತ್ರ್ಯದ ಬಗೆಗೆ ಸ್ತ್ರೀವಾದಿ ಚಿಂತಕರು ತಮ್ಮದೇ ಆದ ಕೆಲವು ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.ಕೆಲವು ಮುಖ್ಯ ಚಿಂತಕರ ಚಿಂತನೆಗಳು ಹೀಗಿವೆ.

"ಸ್ತ್ರೀವಾದದ ಒಳಗೆ ಸ್ವಾತಂತ್ರ್ಯವೆಂಬುದು ಪ್ರಪಂಚದ ಸ್ತ್ರೀಕರಣ ಇದು ಹೆಣ್ಣು ಮತ್ತು ಗಂಡಿನ ನಡುವಿನ ಮಾನಸಿಕ ಮತ್ತು ದೈಹಿಕ ಲಿಂಗ ತತ್ತ್ವದ ದ್ವಂದ್ವ ಮತ್ತು ಬೇರ್ಪಡಿಸುವಿಕೆಗಿಂತ ಭಿನ್ನವಾದುದ್ದು.ಮಾತ್ರವಲ್ಲ ಹೆಚ್ಚು ರಾಜಕೀಯ ಮತ್ತು ಸಾಂಸ್ಕೃತಿಕ ವೈರುಧ್ಯತೆಗಳ ಸೃಷ್ಟಿಯಾಗಿದೆ.ಸ್ತ್ರೀವಾದದಲ್ಲಿ ಸ್ವಾತಂತ್ರದ ಮೂರನೇ ತತ್ವ ಹಾಗೂ ಪ್ರಕ್ರಿಯೆಯೊಂದಿದೆ. ಅದು ಲಿಂಗಭೇದವಿಲ್ಲದ ಹಾದಿ, ಪೌರುಷತ್ವ ಮತ್ತು ಸ್ತ್ರೀತ್ವ ಇವರೆಡು ಒಂದು ಇನ್ನೊಂದನ್ನು ಹೊರತಾಗಿಸುವ, ಅಭಿನ್ನವಾಗಿ ವಿವರಿಸಲಾದ ತತ್ತ್ವಗಳು, ಲಿಂಗರಹಿತ ತತ್ತ್ವದ ಒಳಗೆ ಸ್ತ್ರೀತ್ವವು ಸ್ತ್ರೀಯರಲ್ಲಿ ಮಾತ್ರ ಇರುವುದಲ್ಲ. ಅದು ಪ್ರಕೃತಿಯಲ್ಲಿ ಪುರುಷ ಮತ್ತು ಸ್ತ್ರೀಯರಲ್ಲಿ ಇರುವ ಚಟುವಟಿಕೆ ಮತ್ತು ಕ್ರಿಯಶೀಲತೆಯ ತತ್ತ್ವ ಅದು ಸೃಷ್ಟಿಸುವ ನವ ಸಂಪೂರ್ಣತೆಯು ಲಿಂಗತ್ವವನ್ನು ದಾಟಿ ನಿಲ್ಲಬಲ್ಲುದು ಎಂಬುದು"[೩]ಎಂದು ಕವಿತಾ ರೈಯವರು ಅಭಿಪ್ರಾಯ ಪಡುತ್ತಾರೆ.

ಪ್ರಸಿದ್ಧ ಸ್ತ್ರೀವಾದಿ ಚಿಂತಕಿ ಸಿಮೋನ್ ದ ಬುವಾ ಸ್ತ್ರೀ ಸ್ವಾತಂತ್ರದ ಬಗ್ಗೆ ವ್ಯಕ್ತಪಡಿಸಿದ ನಿಲುವುಗಳೇನೆಂದರೆ. "ಎಂದಿನವರೆಗೆ ಪುರುಷ ನಿರ್ಮಿತ ಮಾನಸಿಕ ವೈಚಾರಿಕ ಚೌಕಟ್ಟುಗಳಲ್ಲಿಯೇ ಸ್ತ್ರೀ ಬದುಕಬೇಕಾಗುತ್ತದೋ ಅಲ್ಲಿಯವರೆಗೆ ನಿಜವಾದ ಅರ್ಥದಲ್ಲಿ ಸ್ತ್ರೀ ಸ್ವತಂತ್ರಳಾಗುವುದಿಲ್ಲ. ಪ್ರತಿಯೊಬ್ಬ ಸ್ತ್ರೀಯ ಅಸ್ತಿತ್ವವು ಅರ್ಥಪೂರ್ಣವಾಗುವುದು ತನ್ನ ಮಿತಿಗಳನ್ನು ಮೀರಿ ಹೊರಬರುವ, ಸ್ವತಂತ್ರವಾಗಿ ಆಯ್ಕೆ ಮಾಡಿಕೊಂಡ ಯೋಜನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಅದಮ್ಯ ಬಯಕೆಯಲ್ಲಿ ಮಾತ್ರ"[೪] ಎಂದಿದ್ದಾರೆ.

"ಮಹಿಳೆಗೆ ಬೇಕಾಗುವುದು ಸ್ವಚ್ಛೆಯಲ್ಲ, ಆಳುವ ಅಧಿಕಾರವಲ್ಲ, ಆಕೆಗೆ ಅವಶ್ಯವಿರುವುದು ಸಹಜವಾಗಿ ಬೆಳೆಯುವ ಅವಕಾಶ, ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ, ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ"[೫] - ಹೀಗೆಂದು ಅಮೇರಿಕಾದ ಪ್ರಖ್ಯಾತ ಮಹಿಳಾ ವಿಮೋಚನಾವಾದಿ ಮಾರ್ಗರೇಟ್ ಪೂಲರ್ ವ್ಯಾಖ್ಯಾನಿಸುತ್ತಾರೆ.

ಕನ್ನಡದ ಪ್ರಮುಖ ಚಿಂತಕರಲ್ಲಿ ಒಬ್ಬರಾದ ಸಿ.ಎನ್. ರಾಮಚಂದ್ರನ್ ರವರು ಹೇಳುವಂತೆ, "ಕೌಟುಂಬಿಕ ಸಂಬಂಧಗಳಾಗಲೀ, ಸ್ತ್ರೀ ವಿಶೇಷ ಎಂದು ಗುರುತಿಸುವ ಇತರ ಅನುಭವವಾಗಲೀ ಅನುಭವದ ಸಾಂದ್ರತೆ ಮತ್ತು ತೀವ್ರತೆಯೊಂದಿಗೆ ಪ್ರಕಟವಾಗುವಾಗ

ಪುರುಷಲೋಕದ ಮತ್ಯಾವುದೇ ಅನುಭವ ವಿಶೇಷಕ್ಕಿಂತ ಕಡಿಮೆಯಾಗಬೇಕಾದ್ದಿಲ್ಲ."[2] ಸ್ತ್ರೀವಾದ, ಸ್ತ್ರೀಸಂವೇದನೆಯನ್ನು ಕುರಿತ ಈ ಚಿಂತಕರ ನಿಲುವುಗಳನ್ನು ಹಿನ್ನೆಲೆಯಾಗಿರಿಸಿಕೊಂಡು ವೈದೇಹಿಯವರ ಕತೆಗಳನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಬಹುದಾಗಿದೆ.

ವೈದೇಹಿಯವರಿಗೆ ಸ್ತ್ರೀ ಸಮಾನತೆಯನ್ನು ಕುರಿತ ದೃಷ್ಟಿಕೋನದಲ್ಲಿ ಹಾಗೂ ಹೋರಾಟದಲ್ಲಿ ಹೆಣ್ಣು ಇಂದಲ್ಲ ನಾಳೆ ಗೆಲ್ಲಬಹುದು ಎಂಬ ವಿಶ್ವಾಸವಿದೆ.ಆದರೆ ಅಂತಹ ಗೆಲುವಿನ ಬಗ್ಗೆ ವೈದೇಹಿಯವರಿಗೆ ಅನುಮಾನಗಳೂ ಇದ್ದೇ ಇವೆ. ಸಮಾನತೆ ಕುರಿತ ಈ ಬಗೆಯ ದ್ವಂದ್ವ, ವೈರುದ್ಯಗಳ ನಡುವೆಯೂ ಸಮಾನತೆಯ ಆಚೆಗಿನ ಅಮೃತ ಮುಹೂರ್ತಗಳು ಹೆಣ್ಣಿನ ಬದುಕಿನಲ್ಲಿವೆ' ಎನ್ನುವುದು ಅವರ ನಿಲುವಾಗಿರುವಂತೆ ತೋರುತ್ತದೆ.ಹೀಗೆ ಹೇಳುವಾಗ ಅವರು ವಾಸ್ತವಕ್ಕೆ ಕುರುಡಾಗಿದ್ದಾರೆ ಎಂದಲ್ಲ. ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯ ಹಾಗೂ ಆಯ್ಕೆಯ ಬದುಕಿನ ಅವಕಾಶ ಎಲ್ಲವು ಅವರ ಕತೆಗಳ ಒತ್ತಾಸೆಗಳಾಗಿವೆ.

'ಭೂತ' ಕತೆಯಲ್ಲಿ ಪಾರ್ವತಿಯು ಮನೆಯ ಒಳಗಿನ ಮತ್ತು ಹೊರಗಿನ ಕೆಲಸವನ್ನು ಸಮರ್ಥವಾಗಿ ನಿಭಾಯಿಸುವವಳು.ಮದುವೆಯಾದ ನಂತರ ತನ್ನ ಗಂಡನಿಗೆ ಮೊದಲೇ ಒಂದು ಮದುವೆಯಾಗಿದ್ದು ತಿಳಿದು ತನ್ನ ಮಗುವಿನೊಂದಿಗೆ ತಾಯಿಯ ಮನೆಗೆ ಬಂದು ಸ್ವತಂತ್ರವಾಗಿ ಬದುಕಲು ತೊಡಗುತ್ತಾಳೆ.ಅವಳ ಗಂಡ ಬಂದು ಕರೆದಾಗ ನಿರಾಕರಿಸುತ್ತಾಳೆ.ಪಾರ್ವತಿಗೆ ಸ್ವತಂತ್ರವಾಗಿ ಬದುಕುವ ಬಗ್ಗೆ ಇರುವ ದೃಢ ನಂಬಿಕೆ, ವಿಶ್ವಾಸ, ಛಲ, ಧೈರ್ಯ ಮೊದಲಾದ ಭಾವನೆಗಳು ಆಕೆಯು ತನ್ನ ಸ್ವಂತ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಸೂಚಿಸುತ್ತವೆ. ಸ್ವತಂತ್ರ ಚಿಂತನೆ, ಕ್ರಿಯೆ ಹಾಗೂ ಭಾವನೆಗಳುಳ್ಳ ವ್ಯಕ್ತಿಯಾಗಿ ಪಾರ್ವತಿ ಈ ಕತೆಯಲ್ಲಿ ಬಿಂಬಿತವಾಗಿದ್ದಾಳೆ.

ವಿವಾಹ ಹೆಣ್ಣಿನ ಬದುಕಿನ ಮಹತ್ವದ ಹಂತ ಎಂದು ಸಮಾಜ ಗುರುತಿಸಿದೆ.ಈ ವಿಚಾರದಲ್ಲಿ ಆಯ್ಕೆಯ ಸ್ವತಂತ್ರ್ಯ ಇಲ್ಲದೆ ಹೆಣಗಾಡುವ ಸ್ತ್ರೀ ಪಾತ್ರಗಳನ್ನು ವೈದೇಹಿಯವರ ಕೆಲವು ಮುಖ್ಯ ಕತೆಗಳಲ್ಲಿ ಕಾಣಬಹುದಾಗಿದೆ.ಚಿಪ್ಪು', 'ಬೀಳು-ಬೇರು', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಅಮ್ಮಚ್ಚಿಯೆಂಬ ನೆನಪು', 'ಅಂತರಂಗದ ಪುಟಗಳು' ಈ ಕತೆಗಳ ವಸ್ತು ವಿವಾಹದ ಬಿಕ್ಕಟ್ಟುಗಳನ್ನು ಕುರಿತದ್ದಾಗಿವೆ. ಇಲ್ಲಿ ವಿವಾಹದ ವಿಚಾರವಾಗಿ ಹೆಣ್ಣಿಗಿರುವ ಸ್ವಾತಂತ್ರ್ಯವೆಷ್ಟು? ಎಂಬ ಪ್ರಶ್ನೆ ಏಳುತ್ತದೆ.ತನ್ನ ಜೀವನದ ಮುಖ್ಯ ತಿರುವಾದ ವಿವಾಹದಲ್ಲಿ ತನ್ನದಲ್ಲದ ನಿರ್ಧಾರಗಳನ್ನು ಒಪ್ಪಿ ಕೊನೆವರೆಗೂ ಹೆಣಗಾಡುವ ಹೆಣ್ಣಿನ ಚಿತ್ರಣವನ್ನು ಈ ಕತೆಗಳಲ್ಲಿ ಕಾಣಬಹುದಾಗಿದೆ.

"ಚಿಪ್ಪು" ಕತೆಯ ಯಶೀಯ ಪಾತ್ರದ ಮೂಲಕ ಸ್ತ್ರೀ ಸ್ವಾತಂತ್ರ ಹೇಗೆ ಕುಟುಂಬದವರಿಂದ ನಿಯಂತ್ರಿಸಲ್ಪಡುತ್ತದೆ ಎಂಬುದನ್ನು ವೈದೇಹಿಯವರು ಚಿತ್ರಿಸಿದ್ದಾರೆ.ಯಶೀಯನ್ನು ಹೊಗಳಿ ಅವಳನ್ನು ಒಳ್ಳೆಯವಳೆಂದು ಹೇಳಿಯೇ ವಿವಾಹದ ಬಗ್ಗೆಯಾಗಲಿ, ಆಕೆಯ ಬದುಕಿನ ಬಗ್ಗೆಯಾಗಲಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳದಂತೆ ನಿರ್ಲಿಪ್ತ ಸ್ಥಿತಿಯಲಿ ನಿಲ್ಲಿಸಿಬಿಡುತ್ತಾರೆ.ಆಕೆಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಇಲ್ಲವಾಗಿಸುತ್ತಾರೆ.ಕೊನೆಗೆ ಅವಳನ್ನು ತನಗೆ ಸಂಸಾರ ಬೇಕೇ?ಬೇಡವೆ?ಏಕೆ?ಎಂಬ ದ್ವಂದ್ವದಲ್ಲಿ ಮುಳುಗುವಂತಹ ಪರಿಸ್ಥಿತಿಗೆ ತಂದು, ಕುಟುಂಬದ ಯಜಮಾನಿಕೆ ಆಕೆಯನ್ನು ನಿಯಂತ್ರಿಬಿಡುತ್ತದೆ.

"ಬೀಳು-ಬೇರು" ಕತೆಯಲ್ಲಿ ಕಥಾನಾಯಕಿ 'ಇಂದಿ' ತಮ್ಮನ್ನು ನೋಡಲು ಬಂದ ಗಂಡುಗಳ ಎದುರು ಪ್ರದರ್ಶನದ ಗೊಂಬೆ ಹಾಗೆ ನಿಲ್ಲುವುದು, ತನಗೆ ಅನಿಸಿದ್ದನ್ನು ಹೇಳಲಾಗದೆ ಚಡಪಡಿಸುವುದು, ಆಕೆಯ ಮೌನ ಇವೇ ಮೊದಲಾದ ಭಾವನೆಗಳ ತುಮುಲಗಳ ಅಭಿವ್ಯಕ್ತಿಯಿದೆ. ಬಂದವರ ಎದುರೆಲ್ಲ ಒಂದು ವಸ್ತುವಿನ ಹಾಗೆ, ಮೂಕ ಪ್ರಾಣಿಯ ಹಾಗೆ ಕುಳಿತುಕೊಳ್ಳುವುದು ಅವಳಿಗೆ ಇಷ್ಟವಿಲ್ಲದ ಕಾರ್ಯ. ಅದನ್ನು ಹೇಳಿ ಪ್ರತಿಭಟಿಸುವ ಸ್ವತಂತ್ರವು ಅವಳಿಗಿಲ್ಲ. ಅಳುವೊಂದೇ ಅವಳ ಪ್ರತಿಕ್ರಿಯೆಯಾಗಿದೆ.ಮನೆಯಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನವನ್ನು ಮಾಡದ ತಮ್ಮಣ್ಣನ ಹೆಂಡತಿಯು ಕೌಟುಂಬಿಕ ವಲಯದ ನಿಯಂತ್ರಣದಿಂದ ನಿಯಂತ್ರಿತವಾಗುವ ಹೆಣ್ಣಿನ ಪ್ರತೀಕವಾಗಿದ್ದಾಳೆ.

"ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ" ಎಂಬ ಕತೆಯು ಒಂದು ಮದುವೆ ಮನೆಯ ಸಮಾರಂಭವನ್ನು ಚಿತ್ರಿಸುವುದರೊಂದಿಗೆ ಮದುವೆ' ಯಲ್ಲಿ ಹೆಣ್ಣಿನ ಪಾತ್ರವೇನು?ಎಂಬುದನ್ನು ಓದುಗರ ಮುಂದಿಡುತ್ತದೆ.ಈ ಕತೆಯಲ್ಲಿ ಬರುವ ಹೆಬ್ಬಾಗಿಲಜ್ಜಿ ತನ್ನ ಮದುವೆ ನಡೆದುದ್ದನ್ನು, ಅದಕ್ಕಾಗಿ ತನ್ನ ಅಪ್ಪ ಒಳ್ಳೆಯ ಜಾತಕ ಹೊಂದಿರುವವನನ್ನು ಹುಡುಕಿ ಹಲವಾರು ಕಡೆ ವಿಚಾರಿಸಿ ಮದುವೆ ಮಾಡಿದ್ದನ್ನು ಹೇಳುತ್ತಾಳೆ.ಆದರೂ ತಾನು ಹದಿನಾಲ್ಕು ವರ್ಷಕ್ಕೆ ವಿಧವೆಯಾಗುತ್ತಾಳೆ.ಸಂಪ್ರದಾಯದ ಪ್ರಕಾರ ಮದುವೆ ಮಾಡುವುದರಿಂದಲೂ ಸಂಭವಿಸಬಹುದಾದ ಅನಾಹುತವನ್ನು ಈಕೆ ಅನುಭವಿಸುತ್ತಾಳೆ.ತನ್ನನ್ನು ಕೇಳದೆ ತಂದೆಯ ಇಷ್ಟದ ರೀತಿ ಮದುವೆ ಮಾಡಿದ್ದರ ಬಗ್ಗೆ ಎಲ್ಲೋ ಒಂದು ಮೂಲೆಯಲ್ಲಿ ತನಗೆ ನೋವಿದೆ ಎಂಬುದನ್ನು ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತಾಳೆ. ಆದರೂ ವಿಧವೆಯಾಗಿ ಸಂಪ್ರದಾಯದ ಕಟ್ಟಳೆಯಂತೆ ಹಣೆಯ ಬೊಟ್ಟಿಲ್ಲದೆ, ಕರಿಮಣಿಯಿಲ್ಲದೆ, ಬೋಳುತಲೆಯ ಮೇಲೆ ಹಾಸಿದ ಕೆಂಪು ಸೆರಗು, ಯಾವ ಉಪಚಾರವಿಲ್ಲದೆ ಸುಕ್ಕುಗಟ್ಟಿನಿವೃತ್ತರಾದ, ಮಂಟಪಕ್ಕೆ ಇನ್ನು ಆಜೀವ ಪರ್ಯಂತ ರಂಗೋಲಿ ಬರೆಯಬಾರದ, ಮಂಟಪದ ಬಳಿ ಸುಳಿಯಲೂ ಕೂಡದ, ಗಂಡಸರ ಕಣ್ಣಿಗೆ ಬೀಳದ ಜಾಗದಲ್ಲಿ ಕುಳಿತು ಮದುವೆಯನ್ನು ಕಾಣಬೇಕಾದ ಸ್ಥಿತಿಯಿಂದಾಗಿ ಬೇಸತ್ತಿರುವುದು" ಈ ಸೂಚ್ಯವಾಗಿ ಕತೆಯಲ್ಲಿ ಅಭಿವ್ಯಕ್ತಗೊಂಡಿದೆ. ಇಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣರ ಮನೆಗಳಲ್ಲಿ ಅನುಸರಿಸುವ ವಿಧಿ ವಿಧಾನಗಳಿಂದ ಹಲವು ಕಷ್ಟಗಳನ್ನು ಅನುಭವಿಸುವ ಹೆಣ್ಣುಗಳ ಚಿತ್ರಣವಿದೆ.

ಮದುವೆ ಮನೆಯಲ್ಲಿ ಗಂಡಸರ ವರ್ತನೆಯ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಇರಬೇಕಾದರೆ ವಾಗತ್ತೆ ಈ ರೀತಿ ಹೇಳುತ್ತಾರೆ.ಹೆಣ್ಣೆ ಏನೆಂತ ತಿಳಿದಿದ್ದೀ ಮುಂಚಿನ ಕಾಲದ ಗಂಡಸರೇ ಹೀಗೆ, ಹೆಂಗಸರನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟಿದ್ದಕ್ಕೆ ಬಚಾವಾದರು.ಅಸ್ತಿ, ಮನೆ ಚಿನ್ನ ಬಣ್ಣ ಮಾಡಿದರು.ಈಗಿನವರಂತೆ ಹೆಂಡತಿ ಕಾತದ್ದೇ ಚಂದ, ನಿಂತದ್ದೇ ಚಂದ ಎಂದಿದ್ದರೊ ಗಂಡನಾದವ ಕವುಂಚಿಯೇ ಹೋಗುವುದಲ್ಲವೇ?ಇಲ್ಲಿ ಸಂಪ್ರದಾಯವನ್ನು ಒಪ್ಪಿಕೊಂಡ ವಾಗತ್ತೆ ಪುರುಷರಾವ ಸಮಾಜದ ಮೌಲ್ಯಗಳನ್ನು ಒಪ್ಪಿಕೊಂಡು ಹೆಣ್ಣಿನ ಸ್ಥಾನಮಾನವನ್ನು ನಿರ್ಧರಿಸುವುದನ್ನು ಕಾಣಬಹುದಾಗಿದೆ. ಹೆಣ್ಣನ್ನು ಕೇಳಿಯೇ ಗಂಡು ಎಲ್ಲ ಕೆಲಸವನ್ನು ಮಾಡಬಾರದು. ಅವನ ಬುದ್ಧಿಗೆ ತೋಚಿದ ರೀತಿ ವರ್ತಿಸಿ ಹೆಣ್ಣನ್ನು ನಿಯಂತ್ರಿಸಿದರೆ ಮಾತ್ರ ಬದುಕು ಸುಗಮವಾಗಿ ನಡೆಯುವುದು ಎಂಬ ಅಭಿಪ್ರಾಯವನ್ನು ವಾಗತ್ತೆ ವ್ಯಕ್ತಪಡಿಸುತ್ತಾಳೆ.ಬಾಲ್ಯದಿಂದಲೂ ತಮ್ಮ ಸಂತೋಷದ ಸಂಕೇತವಾದ, ಬದುಕನ್ನು ಸಹ್ಯಗೊಳಿಸುವ ಎಲ್ಲಾ ರೀತಿ ನೀತಿ ಅಲಂಕಾರಗಳನ್ನು ಬಿಟ್ಟು ಎಷ್ಟೇ ಚಿಕ್ಕ ವಯಸ್ಸಿನಲ್ಲಿ ವಿಧವೆಯಾದರೂ ಎಲ್ಲಾ ಕಷ್ಟಗಳನ್ನು ಅನುಭವಿಸುತ್ತ ತಮಗೆ ಇಷ್ಟವಿಲ್ಲದಿದ್ದರು ವೈರಾಗ್ಯದ ಜೀವನ ನಡೆಸುವ ಹೆಣ್ಣಿನ ಚಿತ್ರಣ ಮನೋಜ್ಞವಾಗಿದೆ.ಬೇಂದ್ರೆಯವರ 'ಪುಟ್ಟ ವಿಧವೆ' ಕವನದ ನಾಯಕಿಯಂತೆ ಇಲ್ಲಿಯು ಎಳೆಯ ಪ್ರಾಯದ ವಿಧವೆ ಸಂಪ್ರದಾಯಕ್ಕೆ ಬಲಿಯಾಗಿ, ಕುರುಡು ಧರ್ಮದ ಸ್ಮಾರಕವಾಗಿ ನಿಂತಿರುವುದನ್ನು ಈ ಕತೆ ಧ್ವನಿಸುತ್ತದೆ.

ಎರಿಕ್ ಎರಿಕ್ಸನ್ ಎಂಬ ಮನೋವಿಜ್ಞಾನಿ "ಹೆಣ್ಣು ಮಕ್ಕಳು ತಾವು ಮದುವೆಯಾಗುವುದು ಯಾರನ್ನು ಮತ್ತು ತಾವು ಯಾರಿಗಾಗಿ ಮನೆಯನ್ನು ನಡೆಸಬೇಕಾಗಿದೆ ಎಂಬುದು ತಿಳಿಯುವವರೆಗೂ? ಹೆಣ್ಣಿನ 'ಅಸ್ತಿತ್ವವನ್ನು ವಿವಾಹವೆಂಬ ಸಂಸ್ಥೆಯ ಮೂಲಕ

**ISSN : 2278-9308 January, 2023**

ಹೇಗೆ ನಿರಾಕರಿಸಲಾಗಿದೆ? ಹೆಣ್ಣಿನ ಸ್ವತಂತ್ರವನ್ನು ಸಮಾಜ ಹೇಗೆ ಕಸಿದುಕೊಳ್ಳುತ್ತದೆ? ಯಾವುದನ್ನೆಲ್ಲ ಇಲ್ಲಿಯತನಕ ಹೆಣ್ಣಿನ ದೌರ್ಬಲ್ಯಗಳು, ನೇತ್ಯಾತ್ಮಕ ಗುಣಗಳು ಎಂದು ವ್ಯವಸ್ಥೆ ಸ್ಥಾಪಿಸುತ್ತಾ ಬಂದಿದೆಯೋ, ಅಥವಾ ಅವುಗಳೇ ಸ್ತ್ರೀಶಕ್ತಿಯ ವಿಶೇಷ ಗುಣಗಳು ಎಂದು ಪರಿಭಾವಿಸುವುದರ ಮೂಲಕ ಹೆಣ್ಣು ಪಡೆಯಬಹುದಾದ ಬಿಡುಗಡೆಯೋ?ಎಂಬಂತಹ ಹಲವು ಪ್ರಶ್ನೆಗಳನ್ನು ಎರಿಕ್ಸನ್ ಎತ್ತಿದ್ದಾನೆ. ಈ ಬಗೆಯ ಹಲವು ಪ್ರಶ್ನೆಗಳನ್ನು ಹಾಗೂ ಈ ಕುರಿತ ಹಲವು ದ್ವಂದ್ವ, ವೈರುಧ್ಯಗಳನ್ನು ವೈದೇಹಿಯವರ ಹಲವು ಕತೆಗಳಲ್ಲಿ ಕಾಣಬಹುದಾಗಿದೆ.ಹೆಣ್ಣಿನ ಚಾಂಚಲ್ಯ ಎನ್ನುವುದು ಪ್ರತಿರೋಧದ ರೂಪವಾಗಿ, ಹೆಣ್ಣಿನ್ನು ಕೇಂದ್ರವಲ್ಲ ಆಕೆ ಅಂಚಿನವಳು ಅನ್ನುವುದಾದರೆ ಆ ಅಂಚೆ ಕೇಂದ್ರವನ್ನು ಹಿಡಿದು ಅಲ್ಲಾಡಿಸಬಲ್ಲ ಸ್ವರೂಪದ್ದಾಗಿ ಇರುವಂತಹ ಕೆಲವು ಸ್ತ್ರೀ ಪಾತ್ರಗಳನ್ನು ತಮ್ಮ ಕತೆಗಳಲ್ಲಿ ಸೃಷ್ಟಿಸಿದ್ದಾರೆ.

ಹೆಣ್ಣಿನ ಮಿತಿ ಎಂದು ಹೇರಲಾದ ಜೈವಿಕ ಸತ್ಯವನ್ನೇ ಹೆಣ್ಣು ತನ್ನ ಶಕ್ತಿಯಾಗಿ ಮಾರ್ಪಡಿಸಿಕೊಳ್ಳಬಹುದಾದ ಸಾಧ್ಯತೆಯನ್ನು ವೈದೇಹಿಯವರ ಕತೆಗಳು ಪರಿಶೀಲಿಸುತ್ತವೆ. ಇದನ್ನು ಆಶಾದೇವಿಯವರು "ಜೈವಿಕ ಸ್ತ್ರೀತ್ವದ ಸ್ವಾಯತ್ತತೆಯ ಪರಿಕಲ್ಪನೆ" ಎಂದು ಕರೆದಿದ್ದಾರೆ. ವೈದೇಹಿಯವರ "ಶಕುಂತಲೆಯೊಂದಿಗೆ ಕಳೆದ ಅಪರಾಹ್ನ" ಎಂಬ ಕತೆಯ ಶಕುಂತಲೆ ತನಗಾದ ಅವಮಾನ, ದ್ರೋಹ, ಅನ್ಯಾಯ, ಭವಿಷ್ಯದ ಅನಿಶ್ಚಿತತೆ ಈ ಎಲ್ಲವನ್ನು ಗೆದ್ದು ಬಿಡುವುದು ಈ ಬಗೆಯ ಜೈವಿಕ ಸ್ತ್ರೀತ್ವದ ಸ್ವಾಯತ್ತತೆಯ ಕಲ್ಪನೆಗೆ ಒಂದು ನಿದರ್ಶನವಾಗಿದೆ. ತನ್ನ ಪಾಲಿಗೆ ದೊರೆತ ಪುರುಷನ ಅಂಶವನ್ನು ತನ್ನೊಳಗೆ ಧಾರಣೆ ಮಾಡಿ, ಅದಕ್ಕೆ ಸಾಕ್ತ ಪೋಷಣೆ ನೀಡಿ ಸಂತಾನವನ್ನು ಈ ಭಾಮಿಗೆ ತರುವ ಅವಳ ಅಂತಃ ಸಾಮರ್ಥ್ಯ ಮತ್ತು ಅನಂತರದಲ್ಲಿ ಆ ಸಂತಾನವನ್ನು ಸಾಕ್ತವಾಗಿ ಸಂಗೋಪ ಮಾಡುವಲ್ಲಿ ಅವಳು ತೋರುವ ದೈಹಿಕ, ಮಾನಸಿಕ, ನೈತಿಕ ಸಾಮರ್ಥ್ಯಗಳು ಅವಳಿಗೆ ಪ್ರೌಢ ಬದುಕಿನ ಸಾರ್ಥಕತೆಯ ಭಾವವನ್ನು ನೀಡುತ್ತವೆ. ಇದು ಅವಳಿಗೆ ಆಕರ್ಷಣೆಯ ವ್ಯಕ್ತಿತ್ವವನ್ನು ಒದಗಿಸುವ ಮುಖ್ಯ ಸಂಗತಿಯಾಗುತ್ತದೆ"[2] ಎಂದು ಮನಃಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. "ಗುಲಾಬಿಮೃದು ಪಾದಗಳು" ಕತೆಯ ನಾಯಕಿಗೆ ತಾಯ್ತನವಿಲ್ಲದ ಬದುಕು ಅಪೂರ್ಣ ಎನಿಸುವುದು ಈ ಕಾರಣಾಕ್ಕಾಗಿಯೇ ತನಗೆ ಸಿಗುವ ತಾಯ್ತನದ ಸುಖವನ್ನು ಅನುಭವಿಸಬೇಕು, ಅದರ ಸಾರ್ಥಕ ಭಾವನ್ನು ಪಡೆಯಬೇಕು.ಆಗ ಮಾತ್ರ ತನ್ನ ಬದುಕು ಈ ಲೋಕದಲ್ಲಿ ಸುಂದರವಾಗಿರುತ್ತದೆ ಎಂದು ಇಲ್ಲಿಯ ಕಥಾನಾಯಕಿ ಆಶಿಸುತ್ತಾಳೆ.

**ನಾಗರೀಕತೆಯ ಕ್ರೌರ್ಯ**

ಭಾರತದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಸಂದರ್ಭದಲ್ಲಿ ಕೌಟುಂಬಿಕ ವ್ಯಾಪ್ತಿಯಲ್ಲಿ ಸ್ತ್ರೀಯರು ಅಪಾರವಾದ ಹಿಂಸೆಗೆ ಒಳಗಾಗಿದ್ದಾರೆ.ಯಾವುದೇ ಬದಲಾವಣೆಯಾದರೂ ಅದು ಪಿತೃಪ್ರಧಾನ ಕುಟುಂಬ ನಿಷ್ಠೆಯನ್ನೇ ಉಳಿಸಿಕೊಂಡು ಬಂದಿದೆ.ಭಾರತದ ಮಹಿಳಾ ಚಳುವಳಿಗಳು ಸಮಾಜದ ಮೂಲಭೂತ ಅಂಗವಾದ ಕುಟುಂಬಗಳ ಕುರಿತಂತೆ ಹಲವಾರು ಪ್ರಶ್ನೆಗಳನ್ನು ಎತ್ತಿವೆ. ಕುಟುಂಬವು ಸ್ತ್ರೀಯರಿಗೆ ಸುರಕ್ಷೆಯನ್ನು ಒದಗಿಸುವ, ಸ್ತ್ರೀಯನ್ನು ಗೌರವಿಸುವ ಸಂಸ್ಥೆಯೇ ಎಂಬುದರ ಪರಿಶೀಲನೆಗೆ ತೊಡಗಿವೆ. ಆದರೂ ಈ ನಾಗರೀಕ ಜಗತ್ತಿನ ಹಲವು ಬಗೆಯ ಹಿಂಸೆಗಳಿಗೆ ಹೆಣ್ಣು ಒಳಗಾಗುತ್ತಲೇ ಬಂದಿದ್ದಾಳೆ.ಮೊದಲಿಗೆ, ಹೆಣ್ಣುಭ್ರೂಣಗಳು ಹಾಗೂ ಹೆಣ್ಣುಶಿಶುಗಳ ಹತ್ಯೆಯು ತವರಿನಲ್ಲಿಯೇ ಎದುರಿಸುವ ಎರಡು ಪ್ರಮುಖ ಹಿಂಸೆಗಳಾಗಿವೆ. ತವರಿನಲ್ಲಿ ಹೆಣ್ಣು ಎದುರಿಸುವ ಇನ್ನೊಂದು ಪ್ರಮುಖ ಹಿಂಸೆ ಲಿಂಗತಾರತಮ್ಯದ್ದಾಗಿದೆ. ಮದುವೆ ಎನ್ನುವ ಸಂಸ್ಥೆಯಿಂದ ಗಂಡನ ಮನೆಯಲ್ಲಿ ಅನುಭವಿಸುವ ಕೌಟುಂಬಿಕ ಹಿಂಸೆಯ ಇನ್ನೊಂದು ಮುಖವನ್ನು ಕಾಣುತ್ತೇವೆ. ಈ ವಿವಾಹ ಸಂಸ್ಥೆಯ ವಿವಿಧ ಮುಖಗಳಾದ ಬಾಲ್ಯವಿವಾಹ, ಬಹುಪತ್ನಿತ್ವ ಅಥವಾ ಪತಿತ್ವ, ವೈಧವ್ಯ, ಪರಿತ್ಯಕ್ತ ಸ್ಥಿತಿಗಳೆಲ್ಲವೂ ಮಹಿಳೆಯ ಮೇಲಿನ ದೌರ್ಜನ್ಯವನ್ನು ತೀವ್ರಗೊಳಿಸುವ ಅಂಶಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ವಿವಾಹಿತ ಮಹಿಳೆಯ ಸಂದರ್ಭದಲ್ಲಿನ ಕೌಟುಂಬಿಕ ಹಿಂಸೆಗೆ ಕಾರಣವಾಗುವ ಅತ್ಯಾಚಾರ, ವರದಕ್ಷಿಣೆ, ವಿಚ್ಛೇದನ, ವೈಧವ್ಯ, ಅನೈತಿಕ ಸಂಬಂಧ ಇತ್ಯಾದಿಗಳ ಕುರಿತಂತೆ ಸ್ತ್ರೀ ಮೇಲಿನ ಹಿಂಸೆಯ ಸ್ವರೂಪವನ್ನು ವೈದೇಹಿಯವರ ಕತೆಗಳಲ್ಲಿನ ಪಾತ್ರಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಬಹುದೆಂದು ತೋರುತ್ತದೆ. ಪಿತೃಪ್ರಧಾನ ವ್ಯವಸ್ಥೆಯ ಬಹುಮುಖ್ಯ ಸಂಸ್ಥೆಯಾದ ಕುಟುಂಬವು ಅದರಲ್ಲೂ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬವು ಮೂಲಭೂತವಾಗಿ ಹೇಗೆ ಹೆಣ್ಣನ್ನು ಪರಿಭಾವಿಸುತ್ತದೆ.ಸ್ವೀಕರಿಸುತ್ತದೆ ಎಂಬುದರ ಹಿನ್ನಲೆಯಲ್ಲಿ ಹಿಂಸೆಯ ಸ್ವರೂಪವನ್ನು ಇಲ್ಲಿ ಗ್ರಹಿಸಬಹುದಾಗಿದೆ. ಇದನ್ನು ನಾಗರೀಕ ಸಮಾಜದ ಗುಣಲಕ್ಷಣವನ್ನಾಗಿ ಪರಿಭಾವಿಸಿ ಅಮೂಲಾಗ್ರ ಬದಲಾವಣೆಗಾಗಿ ಒತ್ತಾಯಿಸುವ ಸ್ತ್ರೀಪರ ಚಿಂತನೆಗಳ ಕಡೆಗೂ ಹೆಚ್ಚಿನ ಗಮನ ಹರಿಸಲಾಗಿರುವುದನ್ನು ವೈದೇಹಿಯವರ ಕಥೆಗಳಲ್ಲಿ ಬರುವ ಸ್ತ್ರೀ ಸಮುದಾಯದ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಹೆಚ್ಚು ಪ್ರಸ್ತುತವೆಂಬುದನ್ನು ಈ ಅಧ್ಯಾಯ ಪರಿಶೀಲಿಸುತ್ತದೆ.

ವೈದೇಹಿಯವರ 'ಅಕ್ಕು' ವಿನಂತಹ ಕತೆಯಲ್ಲಿ ಕೆಟುಂಬಿಕ ಜಗತ್ತಿನ ಹೆಣ್ಣು ಪಡೆಯುವ ಬಿಡುಗಡೆಯ ಭಿನ್ನ ದಾರಿಯನ್ನು, ಪರಿಹಾರದ ಸಾಧ್ಯತೆಯನ್ನು ಗುರುತಿಸಬಹುದಾಗಿದೆ.ಲೋಕಕ್ಕೆ ಹುಚ್ಚಾಗಿ ಕಾಣಿಸುವುದು ಅಕ್ಕುವಿಗೆ ಬಿಡುಗಡೆಯ ದಾರಿಯಾಗಿದೆ.ಆ ಹುಚ್ಚಿನಲ್ಲಿ ಆಕೆ ನಾಗರೀಕತೆಯ ಕ್ರೌರ್ಯದ ವಿರುದ್ಧ ಬಂಡಾಯ ಸಾರುತ್ತಾಳೆ.ಆ ಹುಚ್ಚಿನಲ್ಲಿ ಆಕೆ ಹೇಳುವ ಪರಮಸತ್ಯಗಳು, ನಾಗರೀಕ ಲೋಕವನ್ನು, ಅದು ಜೀರ್ಣಿಸಿಕೊಳ್ಳಲಾಗದ ಅಸಹಾಯಕತೆಗೆ ನಮ್ಮನ್ನು ತಂದು ನಿಲ್ಲಿಸಿಬಿಡುತ್ತದೆ.ಇಲ್ಲಿ ನಾಗರೀಕ ಜಗತ್ತಿನ ಕ್ರೌರ್ಯದ ವಿರುದ್ಧದ ಸತ್ಯಗಳನ್ನು ಕೂಡ ಕತೆ ನಮ್ಮ ಮುಂದಿಡುತ್ತದೆ.ಅಕ್ಕುವಿನ ಪಾತ್ರದ ಮೂಲಕ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಿಸುವ ಹೆಣ್ಣಿನ ಸಮಸ್ಯೆಯನ್ನು ಕಾಣಬಹುದಾಗಿದೆ.ತನ್ನೆಲ್ಲಾ ಆಸೆ-ಆಕಾಂಕ್ಷೆಗಳನ್ನು ಸಮಾಜದ ಕ್ರೌರ್ಯದ ನಡುವೆಯೇ ಈಡೇರಿಸಿಕೊಳ್ಳಬೇಕೆಂಬ ಬಯಕೆ ಅಕ್ಕುವಿನ ವರ್ತನೆಯಲ್ಲಿ ವ್ಯಕ್ತವಾಗಿದೆ. ಇದಕ್ಕೆ ನೆರವಾಗಿ ಈ ವ್ಯವಹಾರ ಪ್ರಪಂಚವು ಕಾದು ನಿಂತಿದೆ.

ವೈದೇಹಿಯವರ ಹಲವು ಕಡೆಗಳಲ್ಲಿ ಬರುವ ಸ್ತ್ರೀಪಾತ್ರಗಳು ಆಧುನಿಕತೆಗೆ ಒಡ್ಡಿಕೊಂಡ ಹಾಗೂ ಒಡ್ಡಿಕೊಳ್ಳಲು ಪ್ರಯತ್ನಿಸುವುದರ ಚಿತ್ರಣವಿದೆ. ಮಧ್ಯಮ ವರ್ಗದ ಕೌಟುಂಬಿಕ ಸಂಬಂಧಗಳು, ಅಲ್ಲಿನ ಸೂಕ್ಷ್ಮ ಬಗೆಯ ರಾಜಕಾರಣ ಹಾಗೂ ಹೆಣ್ಣಿನ ಸೂಕ್ಷ್ಮ ಬಗೆಯ ಭಾವನಾತ್ಮಕ ಸಂಘರ್ಷಗಳ ನಿರೂಪಣೆ ಇವರ ಕತೆಗಳಲ್ಲಿವೆ. ಅವು ಓದುಗರ ಗಮನ ಸೆಳೆಯುತ್ತವೆ. ಗಂಡು-ಹೆಣ್ಣಿನ ಲೈಂಗಿಕ ಸಂಬಂಧಗಳು, ವಿವಾಹವೆಂಬ ಅಧಿಕಾರ ಕೇಂದ್ರದ ಸುತ್ತ ಜರುಗುವ ವೈರುಧ್ಯ ಹಾಗೂ ಬಿಕ್ಕಟ್ಟುಗಳನ್ನು ಇವರ ಕತೆಗಳು ಪರಿಶೀಲಿಸುತ್ತವೆ.

ಮೂಲಭೂತ ಲೈಂಗಿಕ ಪ್ರಶ್ನೆಗಳು, ನೈತಿಕತೆಯ ಪ್ರಶ್ನೆಗಳು, ಅಸ್ತಿತ್ವದ ಪ್ರಶ್ನೆ, ಯಜಮಾನೀ ನೆಲೆಗಳನ್ನು ಬಹು ಸೂಕ್ಷ್ಮ ರೀತಿಯಲ್ಲಿ ಪರಿಶೋಧಿಸುತ್ತವೆ. ಇಲ್ಲಿನ ಸ್ತ್ರೀ ಲೋಕದ ಪುರುಷಪರ, ವಿರೋಧಿ, ಸಹಕಾರಿ ಹಾಗೂ ಸ್ವಾಯತ್ತತೆ ಮುಂತಾದ ಬಹುಸ್ತರಿಯ ಮನಃಸ್ಥಿತಿಗಳನ್ನು ಮುಖ್ಯ ನೆಲೆಯಾಗಿರಿಸಿಕೊಂಡು ಇಲ್ಲಿಯ ಕತೆಗಳು ಚರ್ಚಿಸುತ್ತವೆ. ಆಧುನೀಕರಣದ ಸಂದರ್ಭದಲ್ಲಿ ಸ್ಥಾಪಿತ ಪಿತೃಪ್ರಧಾನ ವ್ಯವಸ್ಥೆಯ ರೂಢಿಗತ ಮೌಲ್ಯಗಳನ್ನು ಬುಡಮೇಲಾಗಿಸುವ ಸೂಕ್ಷ್ಮ ತಂತ್ರಗಳು, ಪ್ರತಿರೋಧಗಳು, ಪರ್ಯಾಯ ಮೌಲ್ಯಗಳ ಸಾಧ್ಯತೆಗಳು ಹಾಗೂ ಸಮಾನತೆಯ ಆಶಯಗಳನ್ನು ವೈದೇಹಿಯವರು ತಮ್ಮ ಕತೆಗಳಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ISSN : 2278-9308
January, 2023

ವಾಸ್ತವತೆಯ ಪ್ರತಿಪಾದನೆ, ಸ್ವಪ್ರಜ್ಞೆ, ಸಮಾಜ ವಿಮರ್ಶೆ, ಪ್ರತಿಭಟನೆ, ವೈಚಾರಿಕತೆ, ಅಂತರ್ಮುಖತೆ ಮುಂತಾದ ಲಕ್ಷಣಗಳು ವೈದೇಹಿಯವರ ಕತೆಗಳ ವೈಶಿಷ್ಟ್ಯವಾಗಿದೆ.ಪಿತೃರೂಪಿ ಲಿಂಗವ್ಯವಸ್ಥೆಯಲ್ಲಿ ಶೀಲ ಅಥವಾ ಪಾತಿವ್ರತ, ನೈತಿಕತೆ, ಲೈಂಗಿಕ ಹಕ್ಕು ಎನ್ನುವುದು ಹೆಣ್ಣಿಗಷ್ಟೇ ಸಂಬಂಧಿಸಿದ ಪರಿಕಲ್ಪನೆಯಾಗಿದೆ.ವೈದೇಹಿಯವರ ಇಂತಹ ಏಕಮುಖಿ ನಿಲುವುಗಳನ್ನು ಇಲ್ಲಿ ಪ್ರಶ್ನಿಸುತ್ತಾರೆ. ಹೆಣ್ಣಿನ ಇಡಿಯಾ ವ್ಯಕ್ತಿತ್ವವನ್ನು ಶೀಲದೊಂದಿಗೆ, ಲೈಂಗಿಕತೆಯೊಂದಿಗೆ ಸಮೀಕರಿಸುವುದನ್ನು ವಿರೋಧಿಸುತ್ತಾರೆ. ಕೌಂಟುಂಬಿಕ ಕೆಲಸ ಮತ್ತು ಜವಾಬ್ದಾರಿಗಳು ಉತ್ಪಾದನಾ ಸಂಬಂಧಗಳು ಲಿಂಗಾಸಾಪೇಕ್ಷ ಮೊದಲಾದ ಪಾರಂಪರಿಕ ನೆಲೆಗಳನ್ನು ಮೀರಿ, ಗಂಡು ಹೆಣ್ಣಿಗೆ ಸಮಾನವಾಗಿ ಹಂಚಿಕೆಯಾಗಬೇಕು ಎನ್ನುವ ಹಕ್ಕೊತ್ತಾಯ 'ಓ ಜಗತ್ತೆ', 'ಪುಟ್ಟಮ್ಮ ಮತ್ತು ಮೊಮ್ಮಗಳು' ಮೊದಲಾದ ಕತೆಗಳಲ್ಲಿ ಕಂಡುಬರುತ್ತದೆ. ಲಿಂಗ ತಾರತಮ್ಯವಿಲ್ಲದೆ ಯಾರು ಯಾವ ಬಗೆಯ ಕೆಲಸವನ್ನಾದರೂ ಮಾಡಬಹುದು ಎಂಬ ನಿಲುವಿನೊಂದಿಗೆ ಹೆಣ್ಣು ಸಮಾನ ಜವಾಬ್ದಾರಿ ಹೊರುವ ಸಂದರ್ಭಗಳನ್ನು ಕಟ್ಟುವ ಕಡೆಗೆ ವೈದೇಹಿಯವರು ಆಸಕ್ತರಾಗಿದ್ದಾರೆ.

ಈ ಬಗೆಯ ಪರಂಪರಾಗತ ಸ್ಥಾಪಿತ ಮೌಲ್ಯಗಳಿಗೆ ಮೀರಿದ ಹೊಸ ಮೌಲ್ಯಗಳ ಹುಡುಕಾಟದ ಸ್ತ್ರೀ ಸಂವೇದನೆಗಳ ಚಿತ್ರಣ ವೈದೇಹಿಯವರ ಹಲವು ಕತೆಗಳಲ್ಲಿ ಕಾಣಬಹುದಾಗಿದೆ.'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು', 'ಆಭಾ' ಮೊದಲಾದ ಕತೆಗಳ ನಾಯಕಿಯರು ಆರ್ಥಿಕ ಸ್ವಾವಲಂಬಿಕ ಸ್ಥಿತಿಯನ್ನುಹೊಂದಿರುವುದರಿಂದ ಕೆಲಮಟ್ಟಿನ ಸ್ವಾತಂತ್ರ ಹಾಗೂ ಬದುಕಿನ ಬಗ್ಗೆ ತನ್ನದೇ ಆದ ಅಭಿಪ್ರಾಯ ಹೊಂದಿರುವರಾಗಿದ್ದಾರೆ."ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು" ಎಂಬ ಕತೆಯಲ್ಲಿ ಲಿಲ್ಲೀಬಾಯಿ ಹೊಸ ಮೌಲ್ಯಗಳೊಂದಿಗೆ ಬದುಕನ್ನು ರೂಪಿಸಿಕೊಳ್ಳುವುದನ್ನು ಕಾಣುತ್ತೇವೆ. ಇಲ್ಲಿ ಸ್ತ್ರೀ ಸ್ವಾತಂತ್ರ್ಯತೆ ಸಮಾನತೆ ಕಾಳಜಿಯೊಂದಿಗೆ ಪುರುಷ ಪ್ರಧಾನ ವ್ಯವಸ್ಥೆಯ ನಿಯಂತ್ರಣಗಳಿಂದ ಬಿಡಿಸಿಕೊಂಡು, ಮುಕ್ತವಾಗಿ ವಿಹರಿಸಬೇಕೆನ್ನುವ ಪ್ರಯತ್ನವಿದೆ.

ಒಟ್ಟಿನಲ್ಲಿ ಉತ್ಪಾದನೆಯ ಕ್ಷೇತ್ರದಲ್ಲಿ ಸ್ತ್ರೀಯ ಪುರುಷನಿಗೆ ಸಮಾನವಾಗಿ ತನ್ನನ್ನು ತೊಡಗಿಸಿಕೊಂಡಾಗಲೇ ಅವಳಿಗೆ ತನ್ನ ದಾಸ್ಯದಿಂದ ಬಿಡುಗಡೆ ಹೊಂದಲು ಸಾದ್ಯವೆಂಬುದು ವೈದೇಹಿಯವರ ಕತೆಗಳ ಮುಖ್ಯ ಚಿಂತನೆಯಾಗಿದೆ.ಇದಕ್ಕೆ ಕಾರಣ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಇಂದು ಅನೇಕ ಅವಕಾಶಗಳನ್ನು ಪಡೆಯುತ್ತಿರುವುದರಿಂದ ಸ್ತ್ರೀ ಸ್ವತಂತ್ರ ಆಲೋಚಿಸುವಂತಾಯಿತು ಎಂಬುದು ಗಮನಾರ್ಹವಾದ ವಿಚಾರವಾಗಿದೆ.

**ಅಡಿಟಿಪ್ಪಣಿ:**

೧. ಅರಿವಿನ ನಡೆ, ಕವಿತಾ ರೈ, ಲೋಹಿಯಾ ಪ್ರಕಾಶನ, ಕ್ಷಿತಿಜ ಕಪ್ಪಗಲ್ಲು ರಸ್ತೆ, ಬಳ್ಳಾರಿ – ೫೮೩೧೦೩, ೨೦೦೭ ಪುಟ – ೪೪, ೪೫
೨. ಅದೇ, ಪುಟ – ೪೯
೩. ಅದೇ, ಪುಟ – ೬೧
೪. ಸಾಹಿತ್ಯ ವಿಮರ್ಶೆ, ಸಿ. ಎನ್ ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳಾರು, ೨೦೦೦, ಪುಟ – ೮೭ – ೮೮
೫. ಸಾಹಿತ್ಯ ಸಂಸ್ಕೃತಿ, ನರಹಳ್ಳಿ ಬಾಲ ಸುಬ್ರಹ್ಮಣ್ಯ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೮, ಪುಟ – ೨೩
೬ ಸಾಹಿತ್ಯ ವಿಮರ್ಶೆ, ಸಿ. ಎನ್ ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳಾರು ೨೦೦೦ ಪುಟ – ೮೭ – ೮೮
೭ ಅಲೆಗಳಲ್ಲಿ ಅಂತರಂಗ, ವೈದೇಹಿಯವರ ಸಮಗ್ರ ಕತೆಗಳ ಸಂಕಲನ ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ಕರ್ನಾಟಕ. ೨೦೦೬, ಪುಟ – ೩೫